ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	804
2	ಸದಸ್ಯರ ಹೆಸರು	ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3	ಉತ್ತರಿಸಬೇಕಾದ ದಿನಾಂಕ	11.03.2020
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ದರಖಾಸ್ತು ಪೌತಿ ಆಂದೋಲನದ ನಂತರ ದುರಸ್ತಿಯಾದ ಜಮೀನುಗಳೆಷ್ಟು;	ಬಾಕಿ ಇರುವ ದರಖಾಸ್ತು ಪ್ರಕರಣಗಳ ವಿಲೇವಾರಿ ಕುರಿತು ರಾಮನಗರ ಜಿಲ್ಲೆಯಲ್ಲಿ ಆಂದೋಲನ ಹಮ್ಮಿಕೊಂಡಿದ್ದು, ಇದರಲ್ಲಿ 238 ಪ್ರಕರಣಗಳಲ್ಲಿ ಒಟ್ಟು 366 ಎಕರೆ 36 ಗುಂಟೆ ಪ್ರದೇಶವನ್ನು ದುರಸ್ತಿಪಡಿಸಲಾಗಿದೆ. ಅದೇ ರೀತಿಯಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ಒಟ್ಟು 259 ಬ್ಲಾಕ್ (ಪ್ರಕರಣ)ಗಳನ್ನು ದುರಸ್ತಿಪಡಿಸಲಾಗಿದೆ.
ಆ)	ಏಕ ವ್ಯಕ್ತಿ ಪ್ರಕರಣದಡಿ ದುರಸ್ತಿಗೊಂಡ ಜಮೀನುಗಳೆಷ್ಟು; ಇವುಗಳಲ್ಲಿ ಬಾಕಿ ಇರುವ ಪ್ರಕರಣಗಳೆಷ್ಟು; ಇದಕ್ಕೆ ಇರುವ ನಿಯಮಾವಳಿಗಳೇನು; ಇದರಿಂದ ಸಾರ್ವಜನಿಕರಿಗೆ ತೊಂದರೆ/ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಪೂರ್ಣ ಮಾಹಿತಿ ನೀಡುವುದು)	**ಏಕವ್ಯಕ್ತಿ ಪ್ರಕರಣದಡಿ ದುರಸ್ತಿಗೊಂಡ ಮತ್ತು ಬಾಕಿ ಇರುವ ಪ್ರಕರಣಗಳ ವಿವರ** (see table below)

ಏಕವ್ಯಕ್ತಿ ಪ್ರಕರಣದಡಿ ದುರಸ್ತಿಗೊಂಡ ಮತ್ತು ಬಾಕಿ ಇರುವ ಪ್ರಕರಣಗಳ ವಿವರ

ಜಿಲ್ಲೆ	ಏಕವ್ಯಕ್ತಿ ಪ್ರಕರಣದಡಿ ದುರಸ್ತಿಗೊಂಡ ಪ್ರಕರಣಗಳು	ಏಕವ್ಯಕ್ತಿ ಪ್ರಕರಣದಡಿ ದುರಸ್ತಿಗೆ ಬಾಕಿ ಇರುವ ಪ್ರಕರಣಗಳು
ರಾಮನಗರ	67	99
ಬೆಂಗಳೂರು ಗ್ರಾಮಾಂತರ	394	164

ಏಕವ್ಯಕ್ತಿ ಪ್ರಕರಣದಡಿ ಪೋಡಿ ದುರಸ್ತಿ ಪಡೆಸಲು ಇರುವ ನಿಯಮಗಳು

1) ಜಮೀನಿನ ಆಕಾರಬಂದು ಮತ್ತು ಪಹಣಿಗಳಲ್ಲಿ ದಾಖಲಾಗಿರುವ ವಿಸ್ತೀರ್ಣ ತಾಳೆಯಾಗಿರಬೇಕು
2) ಪಹಣಿಯ ಕಾಲಂ 3 ಮತ್ತು 9 ರಲ್ಲಿ ನಮೂದಿಸಿರುವ ವಿಸ್ತೀರ್ಣ ತಾಳೆಯಾಗಿರಬೇಕು
3) ಸಂಬಂಧಿಸಿದ ಜಮೀನಿನ ಭೂದಾಖಲೆಗಳು ಲಭ್ಯವಿರಬೇಕು
4) ಕಂದಾಯ ಇಲಾಖೆಯಿಂದ ನಿಗಧಿತ ನಮೂನೆ 1 ರಿಂದ 5ನ್ನು ಭರ್ತಿ ಮಾಡಿ ದೃಢೀಕರಿಸಿ ಭೂಮಾಪನ ಕಛೇರಿಗೆ ಸಲ್ಲಿಸಬೇಕು. ಮತ್ತು
5) ವಿಶೇಷ ಸಂಧರ್ಭದಲ್ಲಿ ಮಾತ್ರ ಏಕವ್ಯಕ್ತಿ ಪ್ರಕರಣದಡಿ ಸಂಬಂಧಿಸಿದ ತಹಶೀಲ್ದಾರರ ಪೂರ್ವಾನುಮತಿಯೊಂದಿಗೆ ಮಂಜೂರಿದಾರರ ಮಂಜೂರಿ ವಿಸ್ತೀರ್ಣ ಮತ್ತು ಅನುಭವ ಆಧರಿಸಿ ಕರ್ನಾಟಕ ಭೂಕಂದಾಯ ನಿಯಮಗಳು, 1966 ರ ನಿಯಮ 50 ರ ಪ್ರಕಾರ ಅಳತೆ ಮಾಡಿ ದರಖಾಸ್ತು ಪೋಡಿ ಮಾಡಲಾಗುವುದು

ಸಂಖ್ಯೆ: ಕಂಇ 45 ಎಸ್ಎಸ್‌ಸಿ 2020

(ಆರ್. ಅಶೋಕ)
ಕಂದಾಯ ಸಚಿವರು